**ಓ ಎಸ್ ನಂ 49/2019**

**ಪಿ. ಡಬ್ಲ್ಯೂ ಃ 3**

**ದಿಃ 08.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ ಃ**

ನನ್ನ ಆಫೀಸ್ ನಲ್ಲಿ ಕಂಪ್ಯೂಟರ್ ಇರುವುದಿಲ್ಲ. ಟೈಪಿಂಗ್ ಅಂಗಡಿಯಲ್ಲಿ ಟೈಪ್ ಮಾಡಿಸಿರುತ್ತೇನೆ. ಕರಾರುಪತ್ರವನ್ನು ನಮ್ಮ ಆಫೀಸ್ ನಲ್ಲಿ ಟೈಪ್ ಮಾಡಿಲ್ಲ. ಸ್ಟ್ಯಾಂಪ್ ಪೇಪರ್ ನ್ನು ವಾದಿಗಳು ಮತ್ತು ಪ್ರತಿವಾದಿಗಳು ತೆಗೆದುಕೊಂಡು ಬಂದಿದ್ದರು. ನನ್ನ ಆಫೀಸ್ ಕೆಳಗಡೆ ಸ್ಟ್ಯಾಂಪ್ ಮಾರಾಟ ಮಾಡುವವರು ಇರುತ್ತಾರೆಂದರೆ ಸರಿ. 2016 ರಲ್ಲಿ ಅವರು ಇರಲಿಲ್ಲ. ನಿ ಪಿ 1 ಮತ್ತು ಸಾಕ್ಷಿಗೆ ಒಂದು ಜೆರಾಕ್ಸ ಕರಾರುಪತ್ರ ತೋರಿಸಿದ್ದು ಅವೆರಡು ಒಂದೇ ದಾಖಲೆ ಇರುತ್ತವೆ ಎಂದು ಹೇಳಿರುತ್ತಾರೆ. ಜೆರಾಕ್ಸ ಪ್ರತಿಯ 2 ನೆ ಪುಟದಲ್ಲಿ ವಿಲ್ ರಿಜಿಸ್ಟರ್ ಕಾಪಿ ಮತ್ತು ದಿನಾಂಕ ಇವುಗಳನ್ನು ಖಾಲಿ ಬಿಟ್ಟಿರುತ್ತದೆ ಎಂದರೆ ಸರಿ. ಆನಂತರ ಅದೇ ದಿನ ವಿಲ್ ಕಾಪಿಯನ್ನು ತರಿಸಿ ಬರವಣಿಗೆ ಮಾಡಿದ್ದೇನೆಂದು ಸಾಕ್ಷಿ ಹೇಳುತ್ತಾರೆ. ಜೆರಾಕ್ಸ ಪ್ರತಿಯಲ್ಲಿ ನನ್ನ ಬಿಕಲಂ ಸಹಿ ಇಲ್ಲಎಂದರೆ ಸರಿ. ಜೆರಾಕ್ಸ ಪತ್ರವನ್ನು ಯಾವಾಗ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಕರಾರುಪತ್ರವನ್ನು ದಿನಾಂಕಃ 8.12.2016 ರಂದು ಮಾಡಿಸಿದ್ದೇನೆ.

ದಾವಾ ಸ್ವತ್ತು ರಾಜು ಇವರಿಗೆ ಸೇರಿದ ಸ್ವತ್ತು ಇರುತ್ತದೆ ಮತ್ತು ನಾವು ಸಹ ವಾರಸುದಾರರು ಇರುತ್ತೇವೆ ಸಹಿ ಮಾಡುತ್ತೇವೆ ಎಂದು ಇತರರು ಹೇಳಿದ್ದರಿಂದ ಅವರ ಸಹಿ ಪಡೆದಿದ್ದೇನೆ. ಅದರಲ್ಲಿ ಒಟ್ಟು ಕುಟುಂಬದ ಸ್ವತ್ತು ಇದೆ, ನಮಗೂ ಅದರಲ್ಲಿ ಹಕ್ಕು ಇದೆ ಎಂದು ಬರೆದಿದೆ. ಕರಾರುಪತ್ರದಲ್ಲಿ ದಾವಾ ಸ್ವತ್ತು ರಾಜು ಇವರಿಗೆ ಸೇರಿದ್ದು ಅದು ಒಟ್ಟು ಕುಟುಂಬದ ಸ್ವತ್ತಾಗಿದ್ದು ನಾವೆಲ್ಲರೂ ಸೇರಿ ಕರಾರುಪತ್ರ ಬರೆದುಕೊಡುತ್ತೇವೆಂದು ಒಕ್ಕಣೆ ಇರುವುದಿಲ್ಲ. ಅದರಲ್ಲಿ 2 ನೆ ಪುಟದಲ್ಲಿ ನಮ್ಮ ಕಚೇರಿಯ ಸೀಲು ಲೈನ್ ಕೆಳಗಡೆ ಬಂದಿದೆ ಎಂದರೆ ಸರಿಯಲ್ಲ. ನಿ ಪಿ 1 ನನ್ನ ಸಮಕ್ಷಮ ಆದ ಕರಾರುಪತ್ರ ಅಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ನಾನು ಸಿಕ್ಕ ಸ್ಥಳದಲ್ಲಿ ಬಿಕಲಂ ಬರಹ ಹಾಕಿ ಸೀಲು ಹಾಕಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾನು ಕಚೇರಿ ಸೀಲು ಲೈನ್ ಗಿಂತ ಕೆಳಗಡೆ ಬಂದಿದೆ ಎಂದರೆ ಸರಿಯಲ್ಲ. ಷರಾದಲ್ಲಿ ಇರುವ ಕೈ ಬರಹ ನನ್ನದಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಇರುವ ಕೈ

ಬರಹ ನನ್ನದಲ್ಲ ಎಂದರೆ ಸರಿಯಲ್ಲ. ಪಾರ್ಟಿದಾರರು ಬರೆದುಕೊಂಡು ಬಂದಿದ್ದ ಷರಾಕ್ಕೆ ನಾನು ಸಹಿ

ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲೂ ಸಹ ಸ್ಥಳ ಹೊಂದಾಣಿಕೆ ಮಾಡುವ ಉದ್ದೇಶದಿಂದ ಚಿಕ್ಕದಾಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಷರಾ ಆಗಿಲ್ಲ ಎಂದರೆ ಸರಿಯಲ್ಲ. ಹಣ ಕೊಡುವುದು ತೆಗೆದುಕೊಳ್ಳುವುದು ಆಗಿಲ್ಲ ಎಂದರೆ ಸರಿಯಲ್ಲ. ಷರಾದಲ್ಲಿ ಬರೆದಿರುವ ಹಣವನ್ನು ನಗದಾಗಿ ಕೊಟ್ಟಿರುತ್ತಾರೆ. ಕರಾರುಪತ್ರದಲ್ಲಿ ಆಸ್ತಿಗೆ ಸಂಬಂಧ ಇಲ್ಲದೆ ಇರುವ ಹನುಮಂತರಾಯ ಮತ್ತು ಇತರರ ಸಹಿ ಪಡೆದು ನಂತರದಲ್ಲಿ ರಾಜು ಇವರ ಸಹಿ ಇರುವ ಸ್ಥಳವನ್ನು ಖಾಲಿ ಬಿಟ್ಟು ನಂತರದಲ್ಲಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಂದೆ ಕರಾರುಪತ್ರ ಅಥವಾ ಷರಾ ಆಗಿಲ್ಲ ಮತ್ತು ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**